ವಿಶೇಷ ಘಟಕ ಯೋಜನೆಯಡಿಯಲ್ಲಿ :

1) ಪರಿಶಿಷ್ಟ ಜಾತಿ ಫಲಾನುಭವಿಗಳಿಗೆ ಚಾಕಿ ಹುಳುಗಳನ್ನು ಎರಡನೆ ಹಂತದವರೆಗೆ ಸಾಕಿ ವಿತರಿಸುವುದು.

2) ರೇಷ್ಮೆ ಹುಳು ಸಾಕಣೆ ಮನೆ ನಿರ್ಮಾಣಕ್ಕೆ 2 ಘಟಕ ದರಗಳಿವೆ. ಹೆಂಚಿನ ಮನೆಗೆ ರೂ. 24,000-00 ಮತ್ತು ತಾರಸಿ ಮನೆಗೆ ರೂ. 30,000-00. ಇದರಲ್ಲಿ ಶೇಕಡ 60 ರಷ್ಟು ಸಹಾಯಧನ ನೀಡುವುದ

3) ನೀರಾವರಿ ಬಾವಿಗಳಿಗೆ ರೂ. 38,000-00 ಸಾಲದ ಶೇಕಡ 60 ರಷ್ಟು ಸಹಾಯ ಧನ ನೀಡುವುದು.

4) ರೇಷ್ಮೆ ಹುಳು ಸಾಕಣೆ ಸಲಕರಣೆಗಳನ್ನು ಪ್ರತಿ ಫಲಾನುಭವಿಗೆ ರೂ. 2,500-00 ಗಳ ಮೌಲ್ಯದ ವಸ್ತುಗಳನ್ನು ಉಚಿತವಾಗಿ ನೀಡುವುದು.

ಬೆಲೆ ಸ್ಥಿರೀಕರಣ ನಿಧಿಯಿಂದ :

1) ಹೊಸ ಪ್ರದೇಶದ ರೇಷ್ಮೆ ಗೂಡು ಮಾರುಕಟ್ಟೆಗಳಲ್ಲಿ ವ್ಯವಹರಿಸುವ ಗೂಡಿಗೆ ಕೆ.ಜಿ. ಒಂದಕ್ಕೆ ರೂ. 5-00 ರಂತೆ ಪ್ರೋತ್ಸಾಹಧನ ನೀಡಲಾಗುತ್ತದೆ.

2) ಹೊಸ ಪ್ರದೇಶದಲ್ಲಿ ರೇಷ್ಮೆ ನೂಲು ಬಿಚ್ಚುವ ರೀಲರ್‌ಗಳಿಗೆ ಪ್ರತಿ ಕೆ. ಜಿ. ರೇಷ್ಮೆಗೆ ರೂ. 50-00 ಗಳ ಪ್ರೋತ್ಸಾಹಧನ.

3) ರೇಷ್ಮೆ ಬೆಳೆಗಾರರು ಹುಳು ಸಾಕಣೆ ಮನೆಗಳನ್ನು ನಿರ್ಮಿಸಲು ಪಡೆದ ಸಾಲದ ಶೇಕಡ 10 ರಷ್ಟನ್ನು ರೀಲರುಗಳಿಗೆ ಯಂತ್ರೋಪಕರಣಗಳನ್ನು ಕೊಳ್ಳಲು ಸಾಲದ ಮೇಲೆ ಶೇಕಡ 25 ರಷ್ಟನ್ನು ಸಹಾಯಧನ ನೀಡಲಾಗುವುದು.

ವಿಷಯ :- ವಿಜಾಪುರ ನಗರ ಪ್ರದೇಶದಲ್ಲಿ ಒಳಚರಂಡಿ ಯೋಜನೆ ಇಲ್ಲದಿರುವುದು.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ 2329 (2976)

ಶ್ರೀ ಬಸವನಗೌಡ ಪಾಟೀಲ್ (ವಿಜಾಪುರ) :- ಮಾನ್ಯ ನಗರಾಭಿವೃದ್ಧಿ ಕಾಡಾ ಮತ್ತು ಹೈದರಾಬಾದ್-ಕರ್ನಾಟಕ ಅಭಿವೃದ್ಧಿ ಮಂಡಳಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ವಿಜಾಪುರ ನಗರ ಪ್ರದೇಶದಲ್ಲಿ ಅನೇಕ ಭಾಗಗಳಲ್ಲಿ ಒಳಚರಂಡಿ ವ್ಯವಸ್ಥೆಯಿಲ್ಲದೇ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಹಾಗಿದ್ದಲ್ಲಿ ಸರಕಾರ ಕೈಗೊಳ್ಳುವ ಕ್ರಮಗಳೇನು?

ಇ) ವಿಜಾಪುರ ನಗರ ಸಭೆಯಲ್ಲಿ ಸೆಪ್ಟಿಕ್-ಟ್ಯಾಂಕುಗಳಿಂದ ಮಲವನ್ನು ತೆಗೆದು ಸ್ವಚ್ಛ ಗೊಳಿಸುವ ಯಂತ್ರಗಳು ಇರದೇ ಇರುವುದು ಸರಕಾರದ ಗಮನಕ್ಕೆ ಬಂದಿದೆಯೇ?

ಈ) ಈ ಯಂತ್ರಗಳನ್ನು ಖರೀದಿಸಲು ಸರಕಾರ ಕ್ರಮ ಕೈಗೊಳ್ಳುವುದೇ?

ಉ) ಯಾವಾಗ ಕ್ರಮ ಕೈಗೊಳ್ಳಲಾಗುವುದು?

ಊ) ಇಂತಹ ಯಂತ್ರಗಳಿಗೆ ಎಷ್ಟು ಹಣ ತಗುಲಬಹುದು?

ಶ್ರೀ ವೈಜನಾಥ ಪಾಟೀಲ್ (ನಗರಾಭಿವೃದ್ಧಿ, ಕಾಡಾ ಮತ್ತು ಹೈದಾರಾಬಾದ್-ಕರ್ನಾಟಕ ಅಭಿವೃದ್ಧಿ ಮಂಡಳಿ ಸಚಿವರು) :-

ಅ) ಹೌದು.

ಆ) ನಗರಸಭೆ ಬಿಜಾಪುರ ಇದರ ಹಣಕಾಸಿನ ಪರಿಸ್ಥಿತಿಯನ್ನು ಅವಲಂಬಿಸಿ ಒಳ ಚರಂಡಿ ವ್ಯವಸ್ಥೆಯನ್ನು ಎಲ್ಲಾ ಪ್ರದೇಶಗಳಿಗೆ ವಿಸ್ತರಿಸಲು ಕ್ರಮ ತೆಗೆದುಕೊಳ್ಳಲಾಗುವುದು.

ಇ) ಹೌದು.

ಈ) ಹಣಕಾಸಿನ ಪರಿಸ್ಥಿತಿಯನ್ನು ಅವಲಂಬಿಸಿ ಬಿಜಾಪುರ ನಗರಸಭೆಯು ಯಂತ್ರ ವನ್ನು ಹೊಂದುವುದು.

ಉ) ನಗರಸಭೆಯ ಹಣಕಾಸಿನ ಪರಿಸ್ಥಿತಿಯು ಸುಧಾರಿಸಿದ ತಕ್ಷಣವೇ.

ಊ) ಸುಮಾರು ರೂ. 8-00 ಲಕ್ಷಗಳು.

ವಿಷಯ :- ನೆರಳು ಭಾಗ್ಯ ಯೋಜನೆ ಕುರಿತು.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ 2331 (3031)

ಶ್ರೀ ಹೆಚ್. ಡಿ. ಬಸವರಾಜ್ (ವಿರಾಜಪೇಟೆ) :- ಮಾನ್ಯ ವಸತಿ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಸರ್ಕಾರ ನೆರಳು ಭಾಗ್ಯ ಯೋಜನೆ ನಿಲ್ಲಿಸುವುದರ ಬಗ್ಗೆ ನಿರ್ಧಾರಮಾಡಿದೆಯೇ;

ಆ) ಹಾಗಿದ್ದಲ್ಲಿ ಪರ್ಯಾಯವಾಗಿ ಈ ಯೋಜನೆ ಅಡಿ ದೊರೆಯುತ್ತಿದ್ದ ಸೌಲಭ್ಯ ಗಳನ್ನು ಬಡವರಿಗೆ ಮತ್ತೆ ದೊರಕಿಸಿ ಕೊಡಲು ಸರ್ಕಾರ ಯಾವ ಯೋಜನೆ ಹಾಕಿಕೊಂಡಿದೆ;

ಶ್ರೀ ಬಸವರಾಜ ರೆಡ್ಡಿ (ವಸತಿ ರಾಜ್ಯ ಸಚಿವರು) :-

ಅ) ಇಲ್ಲ, 1995-96 ರ ಸಾಲಿನಲ್ಲಿ "ನೆರಳಿನ ಭಾಗ್ಯ" ಯೋಜನೆ ಅಡಿಯಲ್ಲಿ 300 ಲಕ್ಷ ರೂ. ಗಳ ಆಯವ್ಯಯ ಅವಕಾಶ ಕಲ್ಪಿಸಲಾಗಿದೆ. ಪೈಕಿ 150 ಲಕ್ಷ ರೂ. ಗಳನ್ನು 7 ಮಲೆನಾಡು ಹಾಗೂ 2 ಸಮುದ್ರತೀರ ಜಿಲ್ಲೆಗಳಿಗೆ ಬಿಡುಗಡೆ ಮಾಡಲಾಗಿದೆ.

ಆ) ಉದ್ಭವಿಸುವುದಿಲ್ಲ.